





ಬಿಡುಗಡೆಯಾಗುತ್ತಿದೆ.

2027ರ ವೇಳೆಗೆ ಆರೋಗ್ಯ ಕ್ಷೇತ್ರದಲ್ಲಿ ಏನೆಲ್ಲಾ ಬದಲಾವಣೆಗಳು ಆಗಬಹುದು... ಎನ್ನುವುದನ್ನು ಊಹಿಸುವುದಕ್ಕೆ ತೊಂದರೆಯೇನೂ ಇಲ್ಲ. ಈಗಾಗಲೇ ಸಾಧ್ಯತೆಗಳನ್ನು ಕಾಣಿಸುತ್ತಿರುವ ತಂತ್ರಜ್ಞಾನದ ಎಳೆ ಹಿಡಿದು ಈ ವಿವರಗಳನ್ನು ಪಟ್ಟಿ ಮಾಡಬಹುದು. ಈಗಾಗಲೆ ಜನಪ್ರಿಯವಾಗುತ್ತಿರುವ ಕೆಲವು ಸೌಲಭ್ಯಗಳ ಕಡೆಗೆ ಗಮನ ಹರಿಸೋಣ:

## ಸ್ಮಾರ್ಟ್ ಆಸ್ಪತ್ರೆ

ಸ್ಮಾರ್ಟ್‌ಫೋನ್, ಸ್ಮಾರ್ಟ್ ಗೇಮ್, ಸ್ಮಾರ್ಟ್ ಟೀವಿ, ಸ್ಮಾರ್ಟ್ ಫ್ರಿಜ್.. ಎಲ್ಲವೂ ಹಳೆಯದಾಯಿತು. ಹೊಸ ಸೇರ್ಪಡೆ ಸ್ಮಾರ್ಟ್ ಆಸ್ಪತ್ರೆ. ಯಾವುದೇ ಶಸ್ತ್ರಚಿಕಿತ್ಸೆ, ಚಿಕಿತ್ಸೆಗಳು ಬೇಕಿದ್ದರೂ ಅತ್ಯಂತ ಶೀಘ್ರವಾಗಿ ನಿರ್ವಹಣೆ ಆಗುವ, ರೋಗಿ ಅತಿ ಶೀಘ್ರದಲ್ಲೇ ವಾಪಸ್ ಮನೆ ಸೇರುವ ಅಥವಾ ಕೆಲಸಕ್ಕೆ ವಾಪಸಾಗುವ ರೀತಿಯ ಸೌಲಭ್ಯ ಗಳು ಈಗ ಬಂದಿದೆ. ತಂತ್ರಜ್ಞಾನ ಮತ್ತು ಜೀವಶಾಸ್ತ್ರಗಳೆರಡೂ ಅವಿನಾಭಾವ ಸಂಬಂಧ ಹೊಂದಿದ್ದು, ಮುಂದಿನ ದಿನಗಳಲ್ಲಿ ಶಸ್ತ್ರಚಿಕಿತ್ಸೆ ಎನ್ನುವುದು ಕ್ಷಣ ಮಾತ್ರದ ಕೆಲಸ ಎನ್ನುವಂತಹ ಸೌಲಭ್ಯಗಳೂ ಬರುವ ಹಾದಿಯಲ್ಲಿವೆ.

‘ಸ್ಮಾರ್ಟ್ ಆಸ್ಪತ್ರೆಗಳ ಹೊಸ ಯುಗ ಆರಂಭವಾಗಿದೆ. ಇದು ಡಿಜಿಟಲ್ ಆಸ್ಪತ್ರೆಗಳಾಗಿ ಬದಲಾಗಿದೆ. ಯಾವುದೇ ದೊಡ್ಡ ಚಿಕಿತ್ಸೆ ಪಡೆಯಲು ಇನ್ನು ಮುಂದೆ ಆಸ್ಪತ್ರೆಗೇ ಅಡ್ಮಿಟ್ ಆಗಬೇಕಾಗಿಲ್ಲ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಬದಲಾಗಿ ಮನೆಯಲ್ಲೇ ಚಿಕಿತ್ಸೆ ಪಡೆಯುವ ಸಂಪೂರ್ಣ ಹೋಮ್‌ಕೇರ್ ಸೌಲಭ್ಯ ಬರಲಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬದಲಿಗೆ ಇ–ಕ್ಲಿನಿಕ್‌ಗಳು ಕಾರ್ಯ ನಿರ್ವಹಿಸಲಿವೆ. ಸ್ಮಾರ್ಟ್ ಡಿವೈಸ್‌ಗಳ ಮೂಲಕ ಹಾಗೂ ರೊಬೊಟಿಕ್ ಸರ್ಜರಿ ಮೂಲಕ ಆರೋಗ್ಯ ಸೇವೆ ಹಾಗೂ ನಿರ್ವಹಣೆಗೆ ಇನ್ನಷ್ಟು ಹೈಟೆಕ್ ಸ್ಪರ್ಶ ಸಿಗಲಿದೆ’ ಎಂದು ಹೇಳುತ್ತಾರೆ ಬೆಂಗಳೂರಿನ ಮಣಿಪಾಲ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಸುದರ್ಶನ ಬಲ್ಲಾಳ್.

ಡಿಜಿಟಲ್ ಡಯಗ್ನಾಸ್ಟಿಕ್ಸ್‌ನಿಂದಾಗಿ ರೋಗಿ ವೈದ್ಯರ ಬಳಿ ಹೋಗಲು ಅಸಾಧ್ಯ ಸ್ಥಿತಿಯಲ್ಲಿರುವಾಗ ಹಲವು ಉತ್ತಮ ಪರ್ಯಾಯ ಮಾರ್ಗಗಳು ಈಗ ತೆರೆದುಕೊಳ್ಳುತ್ತಿವೆ. ಉದಾಹರಣೆಗೆ ನ್ಯೂರೋಟ್ರ್ಯಾಕ್– ಸಾಫ್ಟ್‌ವೇರ್ ಆಧಾರಿತ ಆಲ್ಜೈಮರ್ ಪತ್ತೆಯ ಸಾಧನ. ಇದರ ಮೂಲಕ ಮೆದುಳಿನಲ್ಲಿರುವ ಹಿಪ್ಪೊಕ್ಯಾಂಪಸ್ ಎಂಬ ಭಾಗದಲ್ಲಿ ಆದ ನ್ಯೂನತೆಯನ್ನು ಕಣ್ಣಿನ ಚಲನೆಯನ್ನು ಗಮನಿಸಿಯೇ ಪತ್ತೆ ಹಚ್ಚಬಹುದು. ಈ ತಂತ್ರಜ್ಞಾನ ಬಂದರೆ ಆಸ್ಪತ್ರೆಗೆ ತೆರಳಲೂ ಆಗದಂತಹ ಅಶಕ್ತ ರೋಗಿಗಳಿಗೆ ವರದಾನವಾಗಲಿದೆ. ಇದೇ ರೀತಿ ಡಿಜಿಟಲ್ ಥೆರಪಿಯೂ ಬರಲಿದ್ದು, ಮನೆಯಲ್ಲೇ ಕುಳಿತು ರೋಗಿಗಳು ಚಿಕಿತ್ಸೆ ಪಡೆಯಬಹುದು ಎನ್ನುತ್ತಾರೆ ಸಂಶೋಧಕರು.

ವೈದ್ಯಕೀಯ ರಂಗದಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ



ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

